# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **181** |
| ಉತ್ತರಿಸಬೇಕಾದ ದಿನಾಂಕ | : | 16.02.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿವಿಧ ವಸತಿ ಯೋಜನೆಗಳಡಿ ಮನೆ ನಿರ್ಮಿಸಿಕೊಂಡು ವಾಸವಾಗಿದ್ದು 10 ವರ್ಷಗಳ ಅವಧಿ ಪೂರ್ಣಗೊಳಿಸಿದ ನಂತರ ಮನೆ/ನಿವೇಶನವನ್ನು ಡೀಮ್ಡ್ ರಿಲೀಸ್ ಮಾಡುವಂತೆ ವಸತಿ ಇಲಾಖೆಯು ದಿನಾಂಕ:04/09/2020 ರ ಆದೇಶದಲ್ಲಿ ತಿಳಿಸಿರುವುದು ನಿಜವೇ; | ಹೌದು.<br>ಸರ್ಕಾರದಿಂದ ಮನೆ/ನಿವೇಶನ ಪಡೆದು ಸಾಲ/ಸಹಾಯ ಧನ/ವೈಯಕ್ತಿಕ ಅನುದಾನದಿಂದ ವಿವಿಧ ವಸತಿ ಯೋಜನೆಗಳಡಿ ಮನೆ ನಿರ್ಮಿಸಿ ಕೊಂಡು ವಾಸವಾಗಿದ್ದು, 10 ವರ್ಷಗಳ ಅವಧಿ ಪೂರ್ಣಗೊಳಿಸಿದ ನಂತರ ಮನೆ/ನಿವೇಶನವನ್ನು ಅಡಮಾನ ಮುಕ್ತ(ಡೀಮ್ಡ್ ರಿಲೀಸ್)ಗೊಳಿಸಲು ಸರ್ಕಾರದ ಆದೇಶ:ವಇ 54 ಹೆಚ್ಎಹೆಚ್ 2020, ದಿನಾಂಕ:04.09.2020 ರಲ್ಲಿ ಆದೇಶಿಸಲಾಗಿದೆ. |
| ಆ) | ಫಲಾನುಭವಿಗೆ ಮನೆ ಮಂಜೂರಾತಿ ಆದೇಶ ಪತ್ರ ನೀಡಿ 3-4 ವರ್ಷಗಳ ನಂತರ ಅನುದಾನ ಬಿಡುಗಡೆಯ ವಿಳಂಬ ಇತ್ಯಾದಿ ಕಾರಣಗಳಿಂದ ಮನೆ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಉದಾಹರಣೆಗಳಿದ್ದು, ಇಂತಹ ಸಂದರ್ಭದಲ್ಲಿ ಮನೆ/ನಿವೇಶನದ ಅಡಮಾನವನ್ನು ಡೀಮ್ಡ್ ರಿಲೀಸ್ ಎಂದು ಪರಿಗಣಿಸಲು, ಮನೆ ಮಂಜೂರಾತಿ ಆದೇಶ ನೀಡಿದ ದಿನಾಂಕ ಪರಿಗಣಿಸಬೇಕೇ; | ವಿವಿಧ ವಸತಿ ಯೋಜನೆಗಳಡಿ ಸ್ವಂತ ನಿವೇಶನದಲ್ಲಿ ಸಹಾಯಧನ ಪಡೆದು ಮನೆ ನಿರ್ಮಿಸಿ ಕೊಂಡಿರುವ/ ನಿರ್ಮಿಸಿ ಕೊಳ್ಳುವ ಫಲಾನುಭವಿಗಳ ಆಸ್ತಿ/ನಿವೇಶನವನ್ನು ಅಡಮಾನ ನೋಂದಣಿಯಿಂದ ಸಂಪೂರ್ಣವಾಗಿ ರದ್ದುಪಡಿಸಲು, ಸರ್ಕಾರದ ಆದೇಶ ಸಂಖ್ಯೆ:ವಇ 2 ಹೆಚ್ಎಹೆಚ್ 2022, ದಿನಾಂಕ: 28.01.2022 ರಲ್ಲಿ ಆದೇಶ ಹೊರಡಿಸಲಾಗಿದೆ. |
| ಇ) | ಫಲಾನುಭವಿಗೆ ಕೊನೆಯ ಕಂತಿನ ಅನುದಾನವನ್ನು ಬಿಡುಗಡೆ ಮಾಡಿದ ದಿನಾಂಕವನ್ನು ಪರಿಗಣಿಸಬೇಕೇ ? (ಮಾಹಿತಿ ನೀಡುವುದು) | ಅಡಮಾನ ನೋಂದಣಿಯನ್ನು ರದ್ದುಪಡಿಸಿರುವುದರಿಂದ ದಿನಾಂಕವನ್ನು ಪರಿಗಣಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ :ವಇ 35 ಹೆಚ್ಎಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು